**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ, ನ್ಯಾಯಾಲಯ, ಬ್ಯಾಡಗಿ.**

**ಸಿಸಿ. ನಂ.225/2025**

ದೂರುದಾರರು:

ಕರ್ನಾಟಕ ರಾಜ್ಯ , ಬ್ಯಾಡಗಿ ಪೋಲಿಸ್ ಠಾಣೆ, ಬ್ಯಾಡಗಿ

ವಿರುದ್ಧ

ಆರೋಪಿತರು:

1. ವೀರಣ್ಣ ಬಸವರಾಜಯ್ಯ ಹಿರೇಮಠ, ವಯಾ: 46 ವರ್ಷ
   ಉ: ಶೇತ್ಕಿರಿ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

2. ಸುರೇಶ ಬಸವರಾಜಯ್ಯ ಹಿರೇಮಠ, ವಯಾ: 44 ವರ್ಷ
   ಉ: ಶೇತ್ಕಿರಿ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

3. ತನುಜಾ ವೀರಣ್ಣ ಹಿರೇಮಠ, ವಯಾ: 43 ವರ್ಷ
   ಉ: ಮನೆಕೆಲಸ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

4. ಚೈತ್ರಾ ಸುರೇಶ ಹಿರೇಮಠ, ವಯಾ: 32 ವರ್ಷ
   ಉ: ಮನೆಕೆಲಸ, ಸಾ: ಕಲ್ಲೇದೇವರು, ತಾ: ಬ್ಯಾಡಗಿ, ಜಿ: ಹಾವೇರಿ.

ದೋಷಾರೋಪಣೆ

ನಾನು ಸುರೇಶ ವಗ್ಗನವರ, ಎಂ. ಎ. ಎಲ್. ಎಲ್. ಬಿ. ಸ್ಪೇಷಲ್, ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬ್ಯಾಡಗಿ ನಿಮ್ಮ ಮೇಲೆ ಹೊರಸುವ ದೋಷಾರೋಪಣೆ ಎನೇಂದರೆ:

ಬ್ಯಾಡಗಿ ಪೊಲೀಸ್ ಠಾಣಾ ಹದ್ದಿಯ ಕಲ್ಲೇದೇವರ ಗ್ರಾಮದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಪಿರ್ಯಾದಿ ಮತ್ತು ಆರೋಪಿತರ ಮನೆಗಳು ಅಕ್ಕ-ಪಕ್ಕದಲ್ಲಿರುತ್ತದೆ. ಪಿರ್ಯಾದಿಗೆ ಸಂಬಂಧಿಸಿದ ಪಂಚಾಯ್ತಿ ಆಸ್ತಿ ನಂ: 117 ಮತ್ತು ಆರೋಪಿತರಿಗೆ ಸಂಬಂಧಿಸಿದ ಪಂಚಾಯ್ತಿ ಆಸ್ತಿ ನಂ: 105 ಅಕ್ಕ-ಪಕ್ಕದಲ್ಲಿರುತ್ತದೆ. ಈ ಎರಡು ಆಸ್ತಿ ಮಧ್ಯೆ ಬಿರುದಿನ ಗೋಡೆ ಇದ್ದು, ಆರೋಪಿತರಿಗೂ ಮತ್ತು ಪಿರ್ಯಾದಿದಾರರಿಗೆ ಸಂಬಂಧಿಸಿದ್ದು ಇರುತ್ತದೆ. ಈ ಎರಡು ಆಸ್ತಿಗಳ ಮಧ್ಯೆ ಇರುವ ಬಿರುದಿನ ಗೋಡೆಗೆ

ಸಂಬಂಧಿಸಿದಂತೆ ಆರೋಪಿತರು ಆಗಾಗ ಪಿರ್ಯಾದಿದಾರರ ಜೊತೆ ತಂಟೆ ಮಾಡುತ್ತಾ ಬಂದಿದ್ದು ಇರುತ್ತದೆ.

ದಿನಾಂಕಃ 14.02.2025 ರಂದು ಮಧ್ಯಾಹ್ನ 12.30 ಗಂಟೆಯ ಸುಮಾರಿಗೆ ಪಿರ್ಯಾದಿಯು ಕಲ್ಲೇದೇವರ ಗ್ರಾಮದ ಪಂಚಾಯ್ತಿ ಆಸ್ತಿ ನಂಃ 117 ರಲ್ಲಿ ಕೆಲಸ ಮಾಡುತ್ತಾ ಇರುವಾಗ 1 ರಿಂದ 4 ನೇ ಆರೋಪಿತರಾದ ನೀವುಗಳು ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಗೆ ಯಾಕೇ ಸಂಬಂಧಿಸಿದ ಆಸ್ತಿಯಲ್ಲಿ ಕೆಲಸ ಮಾಡುತ್ತಿದ್ದಿ ಅಂತಾ ಅನ್ನುತ್ತಾ ಪಿರ್ಯಾದಿಗೆ ಎಲ್ಲರೂ ಸೇರಿ ಪಿರ್ಯಾದಿಗೆ ಕೈಯಿಂದ ಹೊಡಿ ಬಡಿ ಮಾಡಿದ ಅಪರಾಧಕ್ಕಾಗಿ ಬಿ.ಎ.ನ್.ಎಸ್-2023 ಕಲಂಃ 115(2) ಸಹಕಲಂಃ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಗೆ ನಿನ್ಯಾರು ಕೇಳ್ಯಾಕ ಅನ್ನುತ್ತಾ ಕಪಾಳಕ್ಕೆ ಹೊಡೆದು, ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿದ ಅಪರಾಧಕ್ಕಾಗಿ ಬಿ.ಎ.ನ್.ಎಸ್-2023 ಕಲಂಃ 74 ಸಹಕಲಂಃ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಗೆ ಅವಾಚ್ಯಶಬ್ದಗಳಿಂದ ಬೈಯ್ದಾಡಿದ ಅಪರಾಧಕ್ಕಾಗಿ ಬಿ.ಎ.ನ್.ಎಸ್-2023 ಕಲಂಃ 352 ಸಹಕಲಂಃ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

ಕೊನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಗೆ ಜೀವದ ಧಮಕಿ ಹಾಕಿ ಜೀವ ಭಯವನ್ನುಂಟು ಮಾಡಿದ ಅಪರಾಧಕ್ಕಾಗಿ ಬಿ.ಎ.ನ್.ಎಸ್-2023 ಕಲಂಃ 351(2) ಸಹಕಲಂಃ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದು ನನ್ನ ಸಂಜ್ಞೆಯೊಳಗಿದೆ.

(ಈ ಮೇಲಿನ ಅಪರಾಧಗಳು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ, ಅವು ನನ್ನಿಂದ ವಿಚಾರಣೆಯಾಗಲ್ಪಡುತ್ತವೆಂದು ತಿಳಿಯಬಯಸುತ್ತೇನೆ.)

ದಿನಾಂಕ: 17.01.2026

(ಸುರೇಶ ವಗ್ಗನವರ)
ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂಎಫ್.ಸಿ. ನ್ಯಾಯಾಲಯ,
ಬ್ಯಾಡಗಿ.

ಪ್ರಶ್ನೆ. 1). ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೆ?

ಉತ್ತರ : 1 ನೇ ಆರೋಪಿ
2 ನೇ ಆರೋಪಿ
3 ನೇ ಆರೋಪಿ
4 ನೇ ಆರೋಪಿ

ಪ್ರಶ್ನೆ .2) ದೋಷಾರೋಪಣೆಯನ್ನು ಒಪ್ಪಿ ಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?

ಉತ್ತರ : 1 ನೇ ಆರೋಪಿ
2 ನೇ ಆರೋಪಿ
3 ನೇ ಆರೋಪಿ
4 ನೇ ಆರೋಪಿ

(ಈ ಮೇಲಿನ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವ ಅಕ್ಷರಗಳಲ್ಲಿ ಬರೆದುಕೊಂಡೆ ಎಂದು ದೃಡಿಕರಿಸುತ್ತೇನೆ.)

Sd/-
(ಸುರೇಶ ವಗ್ಗನವರ)
ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂಎಫ್.ಸಿ. ನ್ಯಾಯಾಲಯ,
ಬ್ಯಾಡಗಿ.

ದಿನಾಂಕ: 17.01.2026